**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 29.08.2024.**

**<u>ಪಾಟೀ ಸವಾಲು : ಶ್ರೀ ಸಿ.ಎಂ. ವಾದಿ ಪರ ವಕೀಲರಿಂದ</u>**

ಈ ದಾವೆಯನ್ನು ಶಾಂತಮ್ಮರವರು ಹೂಡಿದ್ದಾರೆ. ನಾನು 2 ನೇ ಪ್ರತಿವಾದಿಯ ಪರವಾಗಿಯೂ ಸಾಕ್ಷ್ಯ ನೀಡುತ್ತಿದ್ದೇನೆ. ನಾನು ಬಿ.ಎಸ್.ಸಿ. ವ್ಯಾಸಂಗ ಮಾಡಿದ್ದೇನೆ. ನನ್ನ ಸ್ವಂತ ಊರು ಬಳಗೆರೆ. ಈಗ ನಾನು ಬೆಂಗಳೂರಿನ ಸಂಜಯ್ ನಗರದ ಗೆದ್ದಲಹಳ್ಳಿಯಲ್ಲಿ ವಾಸವಿದ್ದೇನೆ. ನಾನು ಈಗ ಬಳಗೆರೆಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನು ವಾರಕ್ಕೊಮ್ಮೆ ಊರಿಗೆ ಹೋಗಿ ಕೃಷಿ ಚಟುವಟಿಕೆಗಳನ್ನು ಮಾಡುತ್ತೇನೆ ಎಂದು ನುಡಿಯುತ್ತಾರೆ. ನನಗೆ 4 ½ ಎಕರೆ ಜಮೀನು ಇದೆ. ಸಾಕ್ಷಿಯು ಸ್ವತಃ ನನ್ನ ಹೆಸರಿಲ್ಲಿ 1 ಎಕರೆ 19 ಗುಂಟೆ ಹಾಗೂ ನನ್ನ ತಾಯಿಯ ಹೆಸರಿನಲ್ಲಿ 2 ಎಕರೆ 14 ಗುಂಟೆ ಜಮೀನು ಇದೆ ಎಂದು ನುಡಿಯುತ್ತಾರೆ.

2 ನೇ ಪ್ರತಿವಾದಿ ನನ್ನ ಅಕ್ಕನ ಮಗ. 2 ನೇ ಪ್ರತಿವಾದಿಯ ತಂದೆ ಕರೇಕಲ್ಲಹಳ್ಳಿಯ ವಾಸಿ. ಸಾಕ್ಷಿಯು ಸ್ವತಃ ಅವರ ತಂದೆಯು ಬಳಗೆರೆಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. 20 ವರ್ಷಗಳ ಹಿಂದೆ ಅವರು ಕರೇಕಲ್ಲಹಳ್ಳಿಗೆ ಹೋಗಿ ನೆಲೆಸಿದ್ದರು. ಪ್ರಸ್ತುತ 2 ನೇ ಪ್ರತಿವಾದಿಯು 20 ವರ್ಷಗಳಿಂದ ಕರೇಕಲ್ಲಹಳ್ಳಿಯಲ್ಲಿ ವಾಸವಿದ್ದಾರೆ. 2 ನೇ ಪ್ರತಿವಾದಿಯು ಈಗ ಬಳಗೆರೆಯಲ್ಲಿ ವಾಸವಿಲ್ಲ.

ಪೂರ್ವಕ್ಕೆ ಹರಿಯಕ್ಕನ ಮನೆ, ಪಶ್ಚಿಮಕ್ಕೆ ನಂಜುಂಡಪ್ಪರವರ ಮನೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಮಾದಪ್ಪರವರ ನಿವೇಶನ ಈ ಚೆಕ್ಕುಬಂದಿಯಲ್ಲಿರುವ ನಿವೇಶನ ಸಂಖ್ಯೆ 195 ವಿಸ್ತೀರ್ಣ ಪೂ–ಪ 45 ಅಡಿಗಳು ಮತ್ತು ಉ–ದ 60 ಅಡಿಗಳ ಸ್ವತ್ತಿನಲ್ಲಿ ವಾದಿ ಶಾಂತಮ್ಮರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಿವೇಶನ ಸಂಖ್ಯೆ 195 ರ ಸ್ವತ್ತು 2 ನೇ

ಪ್ರತಿವಾದಿಗೆ ಸೇರಿದ್ದು ಎಂದು ನುಡಿಯುತ್ತಾರೆ. ವಾದಿಯು ಹಾಜರುಪಡಿಸಿರುವ ನಿಪಿ-1 ರಿಂದ 5 ದಾಖಲೆಗಳಿಂದ ವಾದಿಯ ಸ್ವಾಧೀನವು ರುಜುವಾತಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ವಾದಿಯು ಚೆಕ್ಕುಬಂದಿಯನ್ನು ತಪ್ಪಾಗಿ ನೀಡಿದ್ದಾರೆ ಎಂದು ನುಡಿಯುತ್ತಾರೆ.

ನಿವೇಶನ ಸಂಖ್ಯೆ 196 ರ ಚೆಕ್ಕುಬಂದಿ ಪೂರ್ವಕ್ಕೆ ಹರಿಯಮ್ಮನ ಮನೆ, ಪಶ್ಚಿಮಕ್ಕೆ ಶಾಂತಮ್ಮನ ಮನೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಗಿರೀಶ್ ಕುಮಾರ್ ರವರ ನಿವೇಶನ ಸಂಖ್ಯೆ 195 ಇರುತ್ತದೆ ಎಂದು ನುಡಿಯುತ್ತಾರೆ. ಈಗ ಹೇಳಿದ ನಿವೇಶನ ಸಂಖ್ಯೆ 196 ನನಗೆ ಸೇರಿದ್ದು ಎಂದು ನುಡಿಯುತ್ತಾರೆ. ನಿವೇಶನ ಸಂಖ್ಯೆ 195 ಕ್ಕೂ ಹಾಗೂ ನನಗೂ ಸಂಬಂಧವಿಲ್ಲ. ಸಾಕ್ಷಿಯು ಸ್ವತಃ ಸದರಿ ನಿವೇಶನ ಸಂಖ್ಯೆ 195 ರ ಸ್ವತ್ತು 2 ನೇ ಪ್ರತಿವಾದಿಗೆ ಸೇರಿದೆ ಎಂದು ನುಡಿಯುತ್ತಾರೆ.

ನಿವೇಶನ ಸಂಖ್ಯೆ 195 ರ ಚೆಕ್ಕುಬಂದಿ ಪೂರ್ವಕ್ಕೆ ವೆಂಕಟಲಕ್ಷ್ಮಮ್ಮನ ಮನೆ, ಪಶ್ಚಿಮಕ್ಕೆ ನರಸಿಂಹಮೂರ್ತಿ ಅಥವಾ ಗೋಪಾಲರವರ ಮನೆ, ಉತ್ತರಕ್ಕೆ ನನ್ನ ಸ್ವತ್ತು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ.

ಸಾಕ್ಷಿಯು ನಿಡಿ-1 ರಲ್ಲಿರುವ ಚೆಕ್ಕುಬಂದಿಯನ್ನು ನೋಡಿ ಅದರಲ್ಲಿ ಪೂರ್ವಕ್ಕೆ ಹರಿಯಕ್ಕನ ಮನೆ, ಪಶ್ಚಿಮಕ್ಕೆ ಶಾಂತಮ್ಮನ ಮನೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಗಿರೀಶ್ ಕುಮಾರ್ ರವರ ಖಾಲಿ ಜಾಗ ಎಂದು ನಮೂದಾಗಿದೆ. ಸಾಕ್ಷಿಯು ಮುಂದುವರೆದು ಸದರಿ ಚೆಕ್ಕುಬಂದಿ ತಪ್ಪಾಗಿದೆ ಎಂದು ನುಡಿಯುತ್ತಾರೆ. ನಾನು ಅದನ್ನು ಸರಿಪಡಿಸಲು ಕ್ರಮ ಕೈಗೊಂಡಿರುವುದಿಲ್ಲ ನಾನು ಈಗಲೇ ಈ ಚೆಕ್ಕುಬಂದಿಯನ್ನು ನೋಡುತ್ತಿದ್ದೇನೆಂದು ನುಡಿಯುತ್ತಾರೆ. ನಿಡಿ-1 ರಲ್ಲಿರುವ ಚೆಕ್ಕುಬಂದಿ ಸರಿಯಾಗಿದೆ ಎಂದರೆ ಸರಿಯಲ್ಲ.

ನಿವೇಶನ ಸಂಖ್ಯೆ 195 ರ ವಿಸ್ತೀರ್ಣ 40 X 60 ಅಡಿಗಳು ಇದೆ. ನಿಡಿ-6 ರಲ್ಲಿ ವಿಸ್ತೀರ್ಣ 37 X 60 ಇದೆ. ಸಾಕ್ಷಿಯು ಸ್ವತಃ ವೆಂಕಲಕ್ಷ್ಮಮ್ಮರವರು 3 ಅಡಿ ಸ್ವತ್ತನ್ನು ಒತ್ತುವರಿ ಮಾಡಿ ಮನೆ

ನಿರ್ಮಿಸಿದ್ದಾರೆ ಎಂದು ನುಡಿಯುತ್ತಾರೆ. ಆ ಒತ್ತುವರಿ ಬಗ್ಗೆ ಪಂಚಾಯತಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ಒತ್ತುವರಿಯನ್ನು ನಮಗೆ ತಿಳಿಯದಂತೆ ಮಾಡಿದ್ದಾರೆ. ನಿಡಿ-7 ನ್ನು ಸಾಕ್ಷಿಯು ನೋಡಿ ಅದರಲ್ಲಿ ಚೆಕ್ಕುಬಂದಿ ಪೂರ್ವಕ್ಕೆ ಹರಿಯಮ್ಮನ ಮನೆ, ಪಶ್ಚಿಮಕ್ಕೆ ಶಾಂತಮ್ಮನ ಮನೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಮಂಜುನಾಥ್ ರವರ ಸ್ವತ್ತು ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ಸದರಿ ನಿಡಿ-7 ರಲ್ಲಿ ಪಶ್ಚಿಮಕ್ಕೆ ಶಾಂತಮ್ಮರವರ ಸ್ವತ್ತು ಇದೆ ಎಂದು ನಮೂದಾಗಿದೆ ಎಂದರೆ ಸರಿ. ನನ್ನ ದಕ್ಷಿಣ ಭಾಗಕ್ಕೆ ಮಂಜುನಾಥ್ ರವರ ಸ್ವತ್ತು ಇದೆ ಎಂದರೆ ಸರಿ.

ನಿಡಿ-11 ರ ಹಕ್ಕುಪತ್ರದಲ್ಲಿ 22 ನೇ ನಂಬರಿನ ಪೂರ್ವ ಒಂದು ಸಂಖ್ಯೆಯನ್ನು ಬರೆದು ಅದನ್ನು ತಿದ್ದಿದ್ದಾರೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಸದರಿ ಸಂಖ್ಯೆಯನ್ನು ತಿದ್ದಿದ್ದಾರೆ ಎಂದರೆ ಆವರಣ ಹಾಕಿದ್ದಾರೆ ತಿದ್ದಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-11 ಹಕ್ಕುಪತ್ರವು ನಿವೇಶನ ಸಂಖ್ಯೆ 195 ಕ್ಕೆ ಸಂಬಂಧಪಟ್ಟಿದೆ. ನಾನು ಈ ಮೊದಲು ಹೇಳಿದ ಚೆಕ್ಕುಬಂದಿಗೂ ನಿಡಿ-11 ಹಕ್ಕುಪತ್ರದಲ್ಲಿರುವ ಚೆಕ್ಕುಬಂದಿಗೂ ವ್ಯತ್ಯಾಸವಿದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಹಕ್ಕುಪತ್ರವನ್ನು ಜಿಲ್ಲಾಧಿಕಾರಿಯವರು ನೀಡಿದ್ದರು, ಅನಂತರ ಪಂಚಾಯತಿರವರು ಹೊಸ ಸಂಖ್ಯೆಯ ಮೇಲೆ ನಿವೇಶನ ನೀಡಿದ್ದಾರೆ ಎಂದು ನುಡಿಯುತ್ತಾರೆ. ಹಕ್ಕುಪತ್ರದಲ್ಲಿ ಜಿಲ್ಲಾಧಿಕಾರಿರವರ ಮೊಹರು ಇಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ನಿವೇಶನವನ್ನು ಕಬಳಿಸಲು ನಿಡಿ-11 ಹಕ್ಕುಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ತಂದೆಗೆ ಬಳಗೆರೆಯಲ್ಲಿ ಸ್ವತ್ತುಗಳಿರುವುದಿಲ್ಲ.

ನಿಡಿ-12 ರ ಹಿಂಬದಿಯಲ್ಲಿ ಬರವಣಿಗೆ ಇಲ್ಲ ಎಂದರೆ ಸರಿ. ಸದರಿ ನಿಡಿ-12 ರಲ್ಲಿ ಹಿಂಬದಿಯಲ್ಲಿ ನಮೂದಿಸಿರುವ ಷರತ್ತುಗಳನ್ನು ಎಂದು ಬರೆದಿದೆ ಎಂದರೆ ಸರಿ. ಆ ರೀತಿ ನಿಡಿ-12 ರ ಹಿಂಬದಿಯಲ್ಲಿ ಷರತ್ತುಗಳನ್ನು ಬರೆಯದೇ ಇದ್ದು, ಆ ಕಾರಣದಿಂದಾಗಿ ಸದರಿ ದಾಖಲೆ

ಸೃಷ್ಟಿಪಡಿಸಿದ್ದು ಎಂದರೆ ಸರಿಯಲ್ಲ. ನಿಡಿ–12ರ ಹಕ್ಕುಪತ್ರದಲ್ಲಿ ಹೆಸರು , ಸರ್ವೇ ನಂಬರ್, ದಿನಾಂಕ ಮತ್ತು ಗ್ರಾಮದ ಹೆಸರು ಬರೆದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಿಡಿ–12ರಲ್ಲಿ ಬಳಗೆರೆ ಗ್ರಾಮ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–12 ಹಕ್ಕುಪತ್ರ ನಿವೇಶನ ಸಂಖ್ಯೆ 196 ಕ್ಕೆ ಸಂಬಂಧಪಟ್ಟಿದ್ದು. ನಾನು ಹೇಳಿದ ನಿವೇಶನ ಸಂಖ್ಯೆ 196ರ ಚೆಕ್ಕುಬಂದಿಗೂ ಹಾಗೂ ನಿಡಿ–12 ರಲ್ಲಿರುವ ಚೆಕ್ಕುಬಂದಿಗೂ ಸಾಮ್ಯತೆ ಇಲ್ಲ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗೌರಿಬಿದನೂರು.